ಶ್ರೀ ಹೆಚ್.ಕೆ.ಪಾಟೀಲ್ (ಜಲ ಸಂಪನ್ಮೂಲ ಸಚಿವರು) :

ಅ) ಕಾರಂಜಾ ಯೋಜನೆಯ ಕಾಲುವೆಗಳನ್ನು ನಿರ್ವಹಣೆಯ ಅನುದಾನದಡಿಯಲ್ಲಿ ದುರಸ್ತಿಯನ್ನು ಕೈಗೊಂಡು ಸುಸ್ಥಿತಿಯಲ್ಲಿಡಲಾಗಿದೆ.

ಆ) ಭಾಲ್ಕಿ ಹಾಗೂ ಭಾತಂಬ್ರಾ ಉಪವಿಭಾಗ ಕಛೇರಿಗೆ ಬೀಗ ಹಾಕಿರುವುದಿಲ್ಲ. ಆದರೆ, ಭಾತಂಬ್ರಾ ವಿಭಾಗದ ಕಛೇರಿಗೆ ಡಿಸೆಂಬರ್ 2000ರಲ್ಲಿ ಬೀಗ ಹಾಕಲು ಬಂದ ಸಂಗತಿ ನಿಜವಿರುತ್ತದೆ.

ಇ) ಕಾರಂಜಾ ಬಲದಂಡೆ ಕಾಲುವೆಯ ಡಿಸ್ಟ್ರಿಬ್ಯೂಟರಿ 15ರಲ್ಲಿ ನೀರು ಸೋರುವಿಕೆ ಕಂಡುಬಂದಿಲ್ಲ. ಆದರೆ, ಡಿಸ್ಟ್ರಿಬ್ಯೂಟರಿ 49ರ ಮಣ್ಣಿನ ಏರಿಯ ಭಾಗದಲ್ಲಿ ನೀರು ಸೋರುವಿಕೆ ಇದ್ದು, ಹೊಲದ ಕೆಲ ಭಾಗಗಳಲ್ಲಿ ನೀರು ನಿಂತು ಬಿತ್ತನಗೆ ಅಡಚಣೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ಸೋರುವಿಕೆಯನ್ನು ತಡೆಯಲು ಕ್ರಮ ತೆಗೆದುಕೊಳ್ಳುವ ಬಗ್ಗೆ ಹಲವು ಪ್ರಸ್ತಾವನೆಗಳು ಪರಿಶೀಲನೆಯ ಹಂತದಲ್ಲಿರುತ್ತದೆ. ಇದನ್ನು ಸರಿಪಡಿಸಲು ಸೂಕ್ತ ಕ್ರಮವನ್ನು ಶೀಘ್ರದಲ್ಲೇ ಕೈಗೊಳ್ಳಲಾಗುವುದು.

ಕಾರಂಜಾ ಯೋಜನೆಯಲ್ಲಿ ಅಪ್‌ಷೋರ್ ಕಾಲುವೆ ಮಾಡುವುದು

759(1176) ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) : ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಾರಂಜಾ ಯೋಜನೆಯ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಾದ ಬ್ಯಾಲ ಹಳ್ಳಿಯಿಂದ ನೀಲಮನಹಳ್ಳಿ, ರುದನೂರು, ಧನ್ನೂರಕ್ಕೆ ಅಫ್‌ಷೋರ್ ಕಾಲುವೆ ಮಾಡಬೇಕೆಂದು ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೇ?

ಆ) ಬರದಿದ್ದರೆ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರಿ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು) :

ಅ) ಕಾರಂಜಾ ಯೋಜನೆಯ ವ್ಯಾಪ್ತಿಯಲ್ಲಿ ಬರುವ ಬ್ಯಾಲಹಳ್ಳಿ, ನೀಲಮನಹಳ್ಳಿ, ರುದನೂರ, ಧನ್ನೂರ ಗ್ರಾಮಗಳ ಭೂಮಿಗಳಿಗೆ ನೀರು ಒದಗಿಸುವ ಸಲುವಾಗಿ ಆಫ್‌ಶೋರ್ ಕಾಲುವೆ ಮಾಡುವ ವಿಷಯ ತನಿಖಾ ಹಂತದಲ್ಲಿರುತ್ತದೆ.

ಆ) ಕಾಲುವೆಯ ನಿರ್ಮಾಣಕ್ಕಾಗಿ ಪ್ರಾಥಮಿಕ ಹಂತದ ಸರ್ವೆ ಕಾರ್ಯ ಕೈಗೊಳ್ಳಲಾಗಿದೆ.

ಬಾಗಲಕೋಟೆ ತಾಲ್ಲೂಕಿನಲ್ಲಿ ಹೆಚ್ಚುವರಿ ಅಂಗನವಾಡಿ ಕೇಂದ್ರಗಳನ್ನು ತೆರೆಯುವುದು.

761(930) ಶ್ರೀ ಪೂಜಾರ್ ಪಿ.ಹೆಚ್. (ಬಾಗಲಕೋಟೆ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಾಗಲಕೋಟೆ ತಾಲ್ಲೂಕಿನಲ್ಲಿ 1991ರ ಜನಗಣತಿಯ ಪ್ರಕಾರ 219 ಅಂಗನವಾಡಿ ಕೇಂದ್ರಗಳಿದ್ದು ಪ್ರಸಕ್ತ ಜನಸಂಖ್ಯೆಯ ಅನುಪಾತದಂತೆ ಇನ್ನೂ 80 ಅಂಗನವಾಡಿ ಕೇಂದ್ರಗಳ ಅವಶ್ಯಕತೆ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ?